ಇಲ್ಲ. ಅವನಿಗೆ ಅಮ್ಮನಿಲ್ಲದ ಮನೆಯಲ್ಲಿ ಒಬ್ಬ ಹಿರಿಯರು ಬೇಕಿತ್ತು. ಅದಕ್ಕೆ, ಇಪ್ಪತ್ತು ತುಂಬಿದ ನಾನೇ ಹಿರಿಯಳಾಗಿ ಕಾಲಿಡಬೇಕಾಯಿತು. ನನಗೇನು ಗೊತ್ತು? ಸ್ಥಾನದಲ್ಲಿ ಹಿರಿತನ ಇದ್ದರೂ... ವಯಸ್ಸು, ಅನುಭವ ಏನಿತ್ತು? ವಿದ್ಯೆ ಕೂಡ ಇಲ್ಲ.

'ಇವಳಿಗೆ ಮನೆಕೆಲಸ ಎಲ್ಲ ಬರುತ್ತೆ. ಚೆನ್ನಾಗಿ ಹೊಂದಿಕೊಂಡು ಹೋಗುವ ಗುಣ ಇದೆ...' ಅಂತ ಅಮ್ಮ ನಾನು ಮಾಡಿದ ಚಕ್ಕುಲಿ, ಉಂಡೆಗಳನ್ನು ಅವನಿಗೆ ತಿನ್ನಿಸಿದ್ದೇ ತಿನ್ನಿಸಿದ್ದು. ಅವನಿಗೂ ಅನ್ನಿಸಿರಬೇಕು, ಈ ಕಡಿಮೇ ಓದಿದ ಹುಡುಗೀನೇ ತನಗೆ ಲಾಯಕ್ ಅಂತ. ಆದರೆ ಏನೋ ದೊಡ್ಡ ಮನಸ್ಸು ಮಾಡಿದವನಂತೆ ಹೇಳಿದ 'ತುಂಬಾ ಹೆಣ್ಣು ಬಂದವು ಅತ್ತೆ. ಎಲ್ಲಾ ಓದಿದವರು. ಬ್ಯಾಂಕ್ ಕೆಲಸದಲ್ಲಿ ಇದ್ದವರೂ ಬಂದರು. ಯಾಕೋ ಬೇಡ ಅನ್ನಿಸಿತು' ಅಂತ. 'ಈಗ ಎಲ್ಲಾ ಹಿರಿಯರೂ ಹೇಳ್ತಿದ್ದೀರಿ ಇವಳು ನಮ್ಮ ಮನೆಗೆ ಹೊಂದಿಕೊಳ್ತಾಳೆ ಅಂತ. ಆಯ್ತು. ನನ್ನ ಅಭ್ಯಂತರ ಏನೂ ಇಲ್ಲ' ಅಂದ. ಆಳು ಕಾಳುಗಳ ಜೊತೆ ವ್ಯವಹಾರ ಮಾಡೀ, ಮಾಡೀ ಅದೇ ಗತ್ತು ಮಾತಿನಲ್ಲಿ.

ನನಗಿಂತ ಎರಡು ವರ್ಷ ಚಿಕ್ಕವಳು ಸುಮತಿ. ನನ್ನ ಮದುವೆಯಲ್ಲಿ ರೇಷ್ಮೆ ಸೀರೆ ಉಟ್ಟು ಮೆರೆದಿದ್ದೇ ಮೆರೆದಿದ್ದು. ಅವಳೂ ಹತ್ತನೇ ಕ್ಲಾಸು ದಾಟಲಿಲ್ಲ. ಅವಳ ಮೆದುಳು ಕೋಪವನ್ನು ಮಾತ್ರ ಹಿಡಿದಿಟ್ಟುಕೊಳ್ಳುತ್ತಿತ್ತು, ವಿದ್ಯೆಯನ್ನಲ್ಲ. ಮತ್ತೆ ವಾಸಂತಿ ಮುಖದಲ್ಲಿ ನಗು. ಬೆಳಿಗ್ಗೆ ಕೇಳುತ್ತಿದ್ದ ಹಾಡು ಗುನುಗಿದಳು 'ಬೃಂದಾವನಕೆ ಹಾಲನು ಮಾರಲು...' ಹೌದು. ಬೃಂದಾವನದೆ ಹಾಲನು ಕೊಳ್ಳುವರಾರಿದ್ದರು? ನನ್ನ ಬದುಕಿನ ಬೃಂದಾವನದಲ್ಲಿ ಯಾರೊಬ್ಬರೂ ಇಣುಕಿ ನೋಡಲೇ ಇಲ್ಲವಲ್ಲ! ನನ್ನ ಭಾವನೆಗಳ ಹಾಲನ್ನು ಕಂಡವರಾರು? ನಾನೇ ಕರೆದು ಮಾರಲು ಹೊರಟರೆ, ಕೊಳ್ಳಬೇಕಾದವರೂ ಕೊಳ್ಳಲಿಲ್ಲವಲ್ಲ! ತನ್ನ ಮನದ ಮಾತು ಯಾರ ಕಿವಿಗಾದರೂ ಎಂದಾದರೂ ಬಿದ್ದಿದೆಯೇ ಅಂತ ಸಂಶಯ ನನಗೆ.

ಸುಬ್ರಹ್ಮಣ್ಯ ಚತುರ್ವೇದಿ ಕಪ್ಪಗೆ, ಎತ್ತರಕ್ಕೆ, ದೊಡ್ಡ ಮೀಸೆ ಹೊತ್ತು, ದಪ್ಪ ಕಂಠದಿಂದ ಕೂಗಿದರೆ ಸಾಕು 'ವಾಸಂತೀ...' ಒಂದೇ ಸಲ, ನಾನು ಬಚ್ಚಲಿಗೆ ಹೋಗಿ ಬರುತ್ತಿದ್ದೆ. ಅವನಿಗೆ ಬೇಕಾದ್ದು ತೋಟದ ಆಳಿನಂತೆ ಮನೆಯಲ್ಲಿ, ಕೋಣೆಯಲ್ಲಿ ಒಂದು ಆಳು ಅಷ್ಟೆ. ಅವನ ವಂಶ ಬೆಳಗಬೇಕು. ನನ್ನ ಮನಸ್ಸಿಗೆ ಒಂದಿನಿತೂ ಬೆಲೆ ಕೊಡದವ. ಒಂದು ಸಿನಿಮಾ, ನಾಟಕ, ಎಂದಾದರೂ ಹೊರಗೆ ಕರಕೊಂಡು ಹೋಗಬೇಕು ಅಂತ ಅವನಿಗೆ ಎಂದೂ ಅನ್ನಿಸಲೇ ಇಲ್ಲ. ಮನೆಯ ಟಿ.ವಿಯಲ್ಲಿ ಕೆಲವು ಪ್ರೇಮ ಪ್ರಸಂಗಗಳನ್ನು ಕಂಡಾಗ, ಕಥೆ ಓದುವಾಗ, ಅಕ್ಕ ಪಕ್ಕದವರನ್ನು ನೋಡುವಾಗ ಮನಸ್ಸು ಒಳ ಮೂಲೆಯಲ್ಲಿ ಕುಳಿತು ಕೂಗುತ್ತಿತ್ತು 'ನಿನ್ನ ಗಂಡನೂ ಹೀಗೆ ನಿನ್ನನ್ನು ಕರಕೊಂಡು ಹೋಗಬೇಕು ಅಲ್ಲವೇ? ಹೀಗೆ ಮಾತಾಡಬೇಕು ಅಲ್ಲವೇ? ಮಲ್ಲಿಗೆ ಹೂ ತರಬೇಕಲ್ಲವೇ?...'

ಒಂದು ದಿನ ಅವನ ಸೋದರತ್ತೆ ಬಂದಿದ್ದರು. 'ಎಷ್ಟು ನೀಳ ಜಡೇನೇ ನಿಂದು. ಬಾಚಿ ಹೆಣೆದು ಮುಡಿಸಿದರೆ ರಾಶಿ ಮಲ್ಲಿಗೆ ತಲೆಯಲ್ಲಿ ತಡೆಯುತ್ತೆ ನೋಡು... ಏ ಸುಬ್ರಹ್ಮಣೀ... ಇವತ್ತು ಎರಡು ಮಾರು ಮಲ್ಲಿಗೆ ಹೂ ತೊಗೊಂಬಾರೋ... ಸೊಸಿಗೆ ಮುಡಿಸೋಣ' ಅಕ್ಕರೆಯಿಂದಲೇ ಹೇಳಿದ್ದರು.

'ಏ... ಅದ್ಯಾಕತ್ತೆ. ಮನೇಲಿ ರಾಶಿ ಸುರೀತ ಇಲ್ವ ಗಿಡದಲ್ಲಿ. ಕಿತ್ತು ಮುಡಕೊಳ್ಳಲಿ. ಸುಮ್ನೆ ಹೊರಗೆ ದಂಡ' ಒರಟಾಗಿ ಹೇಳಿ ಹೋಗಿದ್ದ. ಮತ್ತೆಂದೂ ತಾನು ಹೂವಿಗೆ ಆಸೆ ಪಡಲೇ ಇಲ್ಲ.

ನೋವಿಗಾಗಲಿ, ನಲಿವಿಗಾಗಲಿ ಎಂದಿಗೂ ಸ್ಪಂದಿಸದ ಗಂಡ ಅವನು. ಕೈ ಕೊಯ್ದುಕೊಂಡಿದ್ದರೂ, ಹೊಸ ಸೀರೆ ಉಟ್ಟಿದ್ದರೂ ಅವನ ಪ್ರತಿಕ್ರಿಯೆಯೇ ಇಲ್ಲ. ಬರೀ ಆಳು ಕಾಳುಗಳ ಲೆಕ್ಕ, ತೋಟದ ವರಮಾನ, ಗದ್ದೆಯ ಇಳುವರಿ ಇತ್ಯಾದಿ. ಅವನ ಲೋಕದಲ್ಲಿ ನಾನೆಲ್ಲಿದ್ದೆ ಅಂತ ತನಗೆ ತಿಳಿಯಲೇ ಇಲ್ಲ. ಯಾವುದಕ್ಕೂ ಕೊರತೆ ಇಲ್ಲದಿದ್ದರೂ, ಮನಸ್ಸಿಗೆ ಭಾವನೆಗಳಿರುತ್ತವಲ್ಲ! ಅವೇನು ಹೇಳಿ ಕೇಳಿ